# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ ೧೯, ನವೆಂಬರ್, ೨೦೨೫ (ಕಾರ್ತಿಕಾ , ೨೮, ಶಕವರ್ಷ, ೧೯೪೭)<br>BENGALURU, WEDNESDAY 19, NOVEMBER, 2025 ( KARTHIKA , 28, SHAKAVARSHA, 1947) | ನಂ. ೭೩೨<br>No. 732 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ:**ನಅಇ 287 ಎಂಎಲ್‌ಆರ್ 2025**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:19/11/2025.**

## ಅಧಿಸೂಚನೆ

ಕರ್ನಾಟಕ ಪೌರಸಭೆಗಳ ಅಧಿನಿಯಮದ ಕಲಂ 11ರ ಉಪ ಕಲಂ (2) (3) (4) ಹಾಗೂ ಕಲಂ 42 (2ಎ) ರನ್ವಯ ಮತ್ತು ಸರ್ಕಾರದ ಮಾರ್ಗಸೂಚಿ ಸಂಖ್ಯೆ: ನಅಇ 65 ಎಂಎಲ್‌ಆರ್ 2020, ದಿನಾಂಕ 11-09-2020 ರಲ್ಲಿ ಸ್ಪಷ್ಟಪಡಿಸಿರುವಂತೆ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ವಿವಿಧ ಪ್ರವರ್ಗಗಳ ಮೀಸಲಾತಿಯನ್ನು 9ನೇ ಅವಧಿಗೆ ನಿಗದಿಪಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 107 ಎಂಎಲ್‌ಆರ್ 2020 ನ್ನು ದಿನಾಂಕ: 08-10-2020 ರಂದು ಹೊರಡಿಸಲಾಗಿದೆ.

ಈ ಆದೇಶವನ್ನು ಪ್ರಶ್ನಿಸಿ ಶ್ರೀ ಅರ್.ಬಸವರಾಜು ಚನ್ನಗಿರಿ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11566/2020 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಈ ರಿಟ್ ಅರ್ಜಿ ಹಾಗೂ ಇದೇ ರೀತಿ ದಾಖಲಾಗಿದ್ದ ಇತರೆ ರಿಟ್ ಪ್ರಕರಣಗಳನ್ನು ಸೇರ್ಪಡೆಗೊಳಿಸಿ ದಿನಾಂಕ: 08-10-2020 ರ ಅಧಿಸೂಚನೆಗೆ ತಡೆಯಾಜ್ಞೆ ನೀಡಿರುತ್ತದೆ. ಈ ತಡೆಯಾಜ್ಞೆಯನ್ನು ಪ್ರಶ್ನಿಸಿ, ಸರ್ಕಾರದಿಂದ ರಿಟ್ ಅಪೀಲು ಸಂಖ್ಯೆ: 516/2020 ನ್ನು ದಾಖಲಿಸಲಾಗಿತ್ತು. ರಿಟ್ ಅಪೀಲು ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ; 21-10-2020 ರಂದು ಮಧ್ಯಂತರ ಆದೇಶ ನೀಡಿ, ದಿನಾಂಕ: 08-10-2020 ರ ಅಧಿಸೂಚನೆಯಂತೆ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ದಿನಾಂಕ: 02-11-2020 ರೊಳಗಾಗಿ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ ಹಾಗೂ ದಿನಾಂಕ:05-11-2020 ರಂದು ಸರ್ಕಾರದ ಮೇಲ್ಮನವಿಯನ್ನು ಪರಿಗಣಿಸಿ ವಿಲೇ ಮಾಡಿರುತ್ತದೆ.

ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ 08-10-2020 ರ ಅಧಿಸೂಚನೆಯನ್ನು ಅನುಸರಿಸಿ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 9ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ಜರುಗಿಸಲಾಗಿರುತ್ತದೆ.

ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 19-11-2020 ರ ಆದೇಶದಲ್ಲಿ ರಿಟ್ ಅರ್ಜಿ ಸಂಖ್ಯೆ: 11566/2020 ನ್ನು ಅಂಗೀಕರಿಸಿ, ಸರ್ಕಾರದ ಆದೇಶ ದಿನಾಂಕ: 08-10-2020 ನ್ನು

ವಜಾಗೊಳಿಸಿದ್ದು, ಈ ಆದೇಶದ ವಿರುದ್ಧ ಸರ್ಕಾರದಿಂದ ರಿಟ್ ಅಪೀಲು ಸಂಖ್ಯೆ: 551/2020 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 21-04-2021 ರಂದು ನೀಡಿರುವ ಆದೇಶದಲ್ಲಿ ಏಕಸದಸ್ಯ ಪೀಠದ ಆದೇಶವನ್ನು ವಜಾಗೊಳಿಸಿ ಆದೇಶಿಸಿರುತ್ತದೆ.

ರಿಟ್ ಅಪೀಲು ಸಂಖ್ಯೆ; 551/2021 ರ ಪ್ರಕರಣದಲ್ಲಿ ನೀಡಲಾದ ತೀರ್ಪಿನ ವಿರುದ್ಧ ಶ್ರೀ ಚಂದ್ರೇಗೌಡ ಹೆಚ್.ವಿ. ಮತ್ತಿತರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ: 7090/2021 ನ್ನು ದಾಖಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯ ಹಂತದಲ್ಲಿರುವಾಗ ಮಾನ್ಯ ನ್ಯಾಯಾಲಯದ ಆದೇಶದಂತೆ NIC ರವರು software ಮೂಲಕ ಸಿದ್ಧಪಡಿಸಿ ಸಲ್ಲಿಸಿದ್ದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಮೀಸಲಾತಿ ಪಟ್ಟಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ: 13-12-2022 ರಂದು ನೀಡಿರುವ ಆದೇಶದನ್ವಯ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೀಸಲಾತಿಯನ್ನು ನಿಗದಿಪಡಿಸಿ ದಿನಾಂಕ: 05-08-2024 ರಂದು ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳ ಮುಂದೆ ಪ್ರಕರಣಗಳನ್ನು ಬಾಕಿ ಇದ್ದುದರಿಂದ, 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವವರೆಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ, ಕರ್ನಾಟಕ ಪುರಸಭೆಗಳ ಕಾಯ್ದೆ, 1964 ರ ಕಲಂ-315 ರನ್ವಯ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.

ದಿನಾಂಕ: 05-08-2024 ರಂದು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ 10ನೇ ಅವಧಿಗೆ ಮೀಸಲಾತಿಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ ನಂತರ ಅದರಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ 10ನೇ ಅವಧಿಯ ಚುನಾವಣೆಗಳು ಜರುಗಿಸಲಾಗಿರುತ್ತದೆ.

ಶ್ರೀ ಎಸ್.ಆರ್.ಮುರಳಿಗೌಡ ಮತ್ತಿತರರು, ಕೋಲಾರ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 27887/2025 ಹಾಗೂ ಇತರೆ ರಿಟ್ ಪ್ರಕರಣಗಳಲ್ಲಿ ಅರ್ಜಿದಾರರು ಆಡಳಿತಾಧಿಕಾರಿಗಳ ಅವಧಿಯನ್ನು ಹೊರತುಪಡಿಸಿ ಚುನಾಯಿತ ಆಡಳಿತ ಮಂಡಳಿಯ ಅವಧಿಯನ್ನು 05 ವರ್ಷಗಳಿಗೆ ಪರಿಗಣಿಸಿ, ವಿಸ್ತರಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 27887/2025 ಮತ್ತು ಇತರೆ ರಿಟ್ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶಗಳಲ್ಲಿ ಈ ಕೆಳಕಂಡಂತೆ ಮಧ್ಯಂತರ ಆದೇಶ ನೀಡಿರುತ್ತದೆ:

> *"After hearing the learned counsel for the petitioners, it is ordered that till the expiry of the term of the respondent No.4 -Town Municipal Council, Periyapatna, the State Government shall not take any steps to appoint an Administrator under Section 315 of the Karnataka Municipalities Act, 1964 (for short, 'the Act, 1964'). The question whether the State Government is invested with the power under Section 315 of the Act, 1964 to appoint an Administrator in the facts and circumstances of the case is kept open. It is open for the State Government to seek modification of this order".*

ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರುಗಳ ಅವಧಿಗೆ ಸಂಬಂಧಿಸಿದಂತೆ ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 18 ಮತ್ತು Article 243-ಯು ಈ ಕೆಳಗಿನಂತೆ ಇರುತ್ತದೆ.

**Section 18 of the Karnataka Municipalities Act, 1964 reads as below:**

***Section 18:*** *Term of office of councilors elected at a general election shall be five years.*

*"(1A) The term of office of the councilor elected at a general election or nominated in clause (b) of sub-section (1) of section 11 shall commence on the date appointed for the first meeting of the municipal council.*

**Article 243-U of the Constitution of India reads as below:**

***243-U: Duration of Municipalities, etc.***

*(1)Every Municipality, unless sooner dissolved under any law for the time being in force, shall continue for five years from the date appointed for its first meeting and no longer: Provided that a Municipality shall be given a reasonable opportunity of being heard before its dissolution.*

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಕ್ತಾಯವಾಗುತ್ತಿದೆ. ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ-389 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅವಧಿ ಮುಕ್ತಾಯಗೊಂಡಿರುವ ಈ ಕೆಳಕಂಡ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬರುವವರೆಗೂ ಅವುಗಳ ದಿನನಿತ್ಯದ ಕಾರ್ಯನಿರ್ವಹಣೆಗಾಗಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಹಿತದೃಷ್ಟಿಯಿಂದ ಆಡಳಿತಾಧಿಕಾರಿಗಳನ್ನು ನೇಮಿಸಿ ಆದೇಶಿಸಿದೆ.

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | ಜಾರಿಗೆ ಬರುವ ದಿನಾಂಕದಿಂದ | ಆಡಳಿತಾಧಿಕಾರಿಯ ವಿವರ |
|---|---|---|---|
| **ನಗರಸಭೆ** | | | |
| 1. | ಬಾಗಲಕೋಟೆ ನಗರಸಭೆ | 29-10-2025 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ |
| 2. | ರಬಕವಿ ಬನಹಟ್ಟಿ ನಗರಸಭೆ | 10-11-2025 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ |
| 3. | ಮಾಲೂರು ನಗರಸಭೆ | 11-11-2025 | ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ |
| **ಪುರಸಭೆ** | | | |
| 1. | ಗುರುಮಿಟ್ಕಲ್ ಪುರಸಭೆ | 03-11-2025 | ಉಪ ವಿಭಾಗಾಧಿಕಾರಿ, ಯಾದಗಿರಿ ಉಪವಿಭಾಗ |
| 2. | ಆಳಂದ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಕಲಬುರಗಿ ಉಪವಿಭಾಗ |
| 3. | ಕಂಪ್ಲಿ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಬಳ್ಳಾರಿ ಉಪವಿಭಾಗ |
| 4. | ಕೆ.ಆರ್.ನಗರ ಪುರಸಭೆ | 07-11-2025 | ಉಪ ವಿಭಾಗಾಧಿಕಾರಿ, ಹುಣಸೂರು ಉಪವಿಭಾಗ |
| 5. | ಜೇವರ್ಗಿ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಕಲಬುರಗಿ ಉಪವಿಭಾಗ |
| 6. | ದೇವನಹಳ್ಳಿ ಪುರಸಭೆ | 07-11-2025 | ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ |
| 7. | ಬಾಗೇಪಲ್ಲಿ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪವಿಭಾಗ |

| | | | |
|---|---|---|---|
| 8. | ಬ್ಯಾಡಗಿ ಪುರಸಭೆ | 07-11-2025 | ಉಪ ವಿಭಾಗಾಧಿಕಾರಿ, ಹಾವೇರಿ ಉಪವಿಭಾಗ |
| 9. | ರೋಣ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಗದಗ ಉಪವಿಭಾಗ |
| 10. | ಶ್ರೀರಂಗಪಟ್ಟಣ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ |
| 11. | ಹುಮ್ನಾಬಾದ್ ಪುರಸಭೆ | 07-11-2025 | ಉಪವಿಭಾಗಾಧಿಕಾರಿ, ಬಸವಕಲ್ಯಾಣ ಉಪವಿಭಾಗ |
| 12. | ಅಫಜಲ್‌ಪುರ ಪುರಸಭೆ | 08-11-2025 | ಉಪವಿಭಾಗಾಧಿಕಾರಿ, ಕಲಬುರಗಿ ಉಪವಿಭಾಗ |
| 13. | ಚಿಂಚೋಳಿ ಪುರಸಭೆ | 08-11-2025 | ಉಪ ವಿಭಾಗಾಧಿಕಾರಿ, ಸೇಡಂ ಉಪವಿಭಾಗ |
| 14. | ಚಿಟಗುಪ್ಪ ಪುರಸಭೆ | 08-11-2025 | ಉಪ ವಿಭಾಗಾಧಿಕಾರಿ, ಬಸವಕಲ್ಯಾಣ ಉಪವಿಭಾಗ |
| 15. | ತೇರದಾಳ ಪುರಸಭೆ | 08-11-2025 | ಉಪವಿಭಾಗಾಧಿಕಾರಿ, ಜಮಖಂಡಿ ಉಪವಿಭಾಗ |
| 16. | ಬಂಟ್ವಾಳ ಪುರಸಭೆ | 08-11-2025 | ಉಪ ವಿಭಾಗಾಧಿಕಾರಿ, ಮಂಗಳೂರು ಉಪವಿಭಾಗ |
| 17. | ಭಾಲ್ಕಿ ಪುರಸಭೆ | 08-11-2025 | ಉಪವಿಭಾಗಾಧಿಕಾರಿ, ಬಸವಕಲ್ಯಾಣ ಉಪವಿಭಾಗ |
| 18. | ಮೂಡಬಿದಿರೆ ಪುರಸಭೆ | 08-11-2025 | ಉಪ ವಿಭಾಗಾಧಿಕಾರಿ, ಮಂಗಳೂರು ಉಪವಿಭಾಗ |
| 19. | ಸೇಡಂ ಪುರಸಭೆ | 08-11-2025 | ಉಪವಿಭಾಗಾಧಿಕಾರಿ, ಸೇಡಂ ಉಪವಿಭಾಗ |
| 20. | ಹರಪನಹಳ್ಳಿ ಪುರಸಭೆ | 08-11-2025 | ಉಪವಿಭಾಗಾಧಿಕಾರಿ, ಹರಪ್ಪನಹಳ್ಳಿ ಉಪವಿಭಾಗ |
| 21. | ಕುಣಿಗಲ್ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ತುಮಕೂರು ಉಪವಿಭಾಗ |
| 22. | ಗುಳೇದಗುಡ್ಡ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ಬಾಗಲಕೋಟೆ ಉಪವಿಭಾಗ |
| 23. | ಚನ್ನರಾಯಪಟ್ಟಣ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಹಾಸನ ಉಪವಿಭಾಗ |
| 24. | ಚಿತ್ತಾಪುರ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ಸೇಡಂ ಉಪವಿಭಾಗ |
| 25. | ಟಿ.ನರಸೀಪುರ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಮೈಸೂರು ಉಪವಿಭಾಗ |
| 26. | ಪಾವಗಡ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ |
| 27. | ಪಿರಿಯಾಪಟ್ಟಣ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಹುಣಸೂರು ಉಪವಿಭಾಗ |
| 28. | ಮಾಗಡಿ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ರಾಮನಗರ ಉಪವಿಭಾಗ |

| | | | |
|---|---|---|---|
| 29. | ಶಿಕಾರಿಪುರ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ಸಾಗರ ಉಪ ವಿಭಾಗ |
| 30. | ಶ್ರೀನಿವಾಸಪುರ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಕೋಲಾರ ಉಪವಿಭಾಗ |
| 31. | ಹಾನಗಲ್ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಸವಣೂರು ಉಪವಿಭಾಗ |
| 32. | ಹೆಚ್.ಡಿ.ಕೋಟೆ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಹುಣಸೂರು ಉಪವಿಭಾಗ |
| 33. | ಹೊನ್ನಾಳಿ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಹೊನ್ನಾಳಿ ಉಪವಿಭಾಗ |
| 34. | ಹೊಸದುರ್ಗ ಪುರಸಭೆ | 10-11-2025 | ಉಪವಿಭಾಗಾಧಿಕಾರಿ, ಚಿತ್ರದುರ್ಗ ಉಪವಿಭಾಗ |
| 35. | ಹೊಳೇನರಸೀಪುರ ಪುರಸಭೆ | 10-11-2025 | ಉಪ ವಿಭಾಗಾಧಿಕಾರಿ, ಹಾಸನ ಉಪವಿಭಾಗ |
| 36. | ಬನ್ನೂರು ಪುರಸಭೆ | 11-11-2025 | ಉಪ ವಿಭಾಗಾಧಿಕಾರಿ, ಮೈಸೂರು ಉಪವಿಭಾಗ |
| 37. | ಬಾದಾಮಿ ಪುರಸಭೆ | 11-11-2025 | ಉಪ ವಿಭಾಗಾಧಿಕಾರಿ, ಬಾಗಲಕೋಟೆ ಉಪವಿಭಾಗ |
| 38. | ಶಿರಾಳಕೊಪ್ಪ ಪುರಸಭೆ | 11-11-2025 | ಉಪವಿಭಾಗಾಧಿಕಾರಿ, ಸಾಗರ ಉಪ ವಿಭಾಗ |
| **ಪಟ್ಟಣ ಪಂಚಾಯಿತಿ** | | | |
| 1. | ಅರಕಲಗೂಡು ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಅರಕಲಗೂಡು ತಾಲ್ಲೂಕು |
| 2. | ಕಲಘಟಗಿ ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಕಲಘಟಗಿ ತಾಲ್ಲೂಕು |
| 3. | ಗುಬ್ಬಿ ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಗುಬ್ಬಿ ತಾಲ್ಲೂಕು |
| 4. | ಮುಲ್ಕಿ ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಮುಲ್ಕಿ ತಾಲ್ಲೂಕು |
| 5. | ಮೊಳಕಾಲ್ಮೂರು ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಮೊಳಕಾಲ್ಮೂರು ತಾಲ್ಲೂಕು |
| 6. | ಯಲ್ಲಾಪುರ ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಯಲ್ಲಾಪುರ ತಾಲ್ಲೂಕು |
| 7. | ಹಿರೇಕೆರೂರು ಪಟ್ಟಣ ಪಂಚಾಯತಿ | 07-11-2025 | ತಹಶೀಲ್ದಾರ್, ಹಿರೇಕೆರೂರು ತಾಲ್ಲೂಕು |
| 8. | ತೆಕ್ಕಲಕೋಟೆ ಪಟ್ಟಣ ಪಂಚಾಯತಿ | 08-11-2025 | ತಹಶೀಲ್ದಾರ್, ಸಿರಗುಪ್ಪ ತಾಲ್ಲೂಕು |
| 9. | ನರಸಿಂಹರಾಜಪುರ ಪಟ್ಟಣ ಪಂಚಾಯತಿ | 08-11-2025 | ತಹಶೀಲ್ದಾರ್, ನರಸಿಂಹರಾಜಪುರ ತಾಲ್ಲೂಕು |
| 10. | ಬೆಳ್ತಂಗಡಿ ಪಟ್ಟಣ ಪಂಚಾಯತಿ | 08-11-2025 | ತಹಶೀಲ್ದಾರ್, ಬೆಳ್ತಂಗಡಿ ತಾಲ್ಲೂಕು |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | | |
|---|---|---|---|
| 11. | ಶಿರಹಟ್ಟಿ ಪಟ್ಟಣ ಪಂಚಾಯತಿ | 08-11-2025 | ತಹಶೀಲ್ದಾರ್, ಶಿರಹಟ್ಟಿ ತಾಲ್ಲೂಕು |
| 12. | ಹನೂರು ಪಟ್ಟಣ ಪಂಚಾಯತಿ | 08-11-2025 | ತಹಶೀಲ್ದಾರ್, ಹನೂರು ತಾಲ್ಲೂಕು |
| 13. | ಹೊನ್ನಾವರ ಪಟ್ಟಣಪಂಚಾಯತಿ | 08-11-2025 | ತಹಶೀಲ್ದಾರ್, ಹೊನ್ನಾವರ ತಾಲ್ಲೂಕು |
| 14. | ಔರಾದ್ ಪಟ್ಟಣ ಪಂಚಾಯತಿ | 10-11-2025 | ತಹಶೀಲ್ದಾರ್, ಔರಾದ ಬಿ ತಾಲ್ಲೂಕು |
| 15. | ಜಗಳೂರು ಪಟ್ಟಣ ಪಂಚಾಯತಿ | 10-11-2025 | ತಹಶೀಲ್ದಾರ್, ಜಗಳೂರು ತಾಲ್ಲೂಕು |
| 16. | ಮುಳಗುಂದ ಪಟ್ಟಣ ಪಂಚಾಯತಿ | 10-11-2025 | ತಹಶೀಲ್ದಾರ್, ಗದಗ |
| 17. | ಹಟ್ಟಿ ಪಟ್ಟಣ ಪಂಚಾಯತಿ | 10-11-2025 | ತಹಶೀಲ್ದಾರ್, ಹಟ್ಟಿ ತಾಲ್ಲೂಕು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ-1&3)

## ಕರ್ನಾಟಕ ಸರ್ಕಾರ

ಸಂಖ್ಯೆ:**ನಅಇ 287 ಎಂಎಲ್ಆರ್ 2025**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:19/11/2025.**

## ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 287 ಎಂಎಲ್ಆರ್ 2025; ದಿನಾಂಕ:07.11.2025 ರಲ್ಲಿನ ಪಟ್ಟಿಯಲ್ಲಿನ ಕ್ರಮ ಸಂಖ್ಯೆ:23 ರಲ್ಲಿ **"ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ"** ಎಂದಿರುವುದನ್ನು **"ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 287 ಎಂಎಲ್ಆರ್ 2025; ದಿನಾಂಕ:07/11/2025 ರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH